ಡಿವಿಲಿಯರ್ಸ್ 198 ಸಿಕ್ಸರ್ ಸಿಡಿಸಿದ್ದಾರೆ. ಗೇಲ್ ಹಾಗೂ ಅವರ ನಡುವಿನ ದೊಡ್ಡ ಅಂತರ ಗಮನಿಸಿ. ದೋನಿ 187, ರೈನಾ 186, ರೋಹಿತ್ 185 ಸಿಕ್ಸರ್‌ಗಳನ್ನು ಮಾರ್ಚ್ 28ರವರೆಗೆ ತಮ್ಮ ಖಾತೆಗೆ ಹಾಕಿಕೊಂಡು ಬೀಗುತ್ತಿದ್ದಾರೆ.

ದೊಡ್ಡ ಹೊಡೆತಗಾರರ ಈ ಎರಡೂ ಪಟ್ಟಿಗಳನ್ನು ಗಮನಿಸಿದರೆ ಯಾರೂ ಅನನುಭವಿಗಳಲ್ಲ ಎನ್ನುವುದು ಗೊತ್ತಾಗುತ್ತದೆ. ಒಂದು ಡಜನ್ ಋತುಗಳನ್ನು ಹಾದು ಬಂದಿರುವ ಐಪಿಎಲ್ ಕೂಡ ಹೇಗೆ ಮಾಗಿದ ಆಟವನ್ನು ಉಣಿಸುತ್ತಿದೆ ಎನ್ನುವುದಕ್ಕೆ ಇದೇ ಸಾಕ್ಷಿ.

ರನ್ ಗಳಿಕೆಯಲ್ಲಿ ನಂಬರ್ ಒನ್ ಸ್ಥಾನದಲ್ಲಿದ್ದು, ಪದೇ ಪದೇ ಕಿತ್ತಳೆ ಟೋಪಿ ಹಾಕಿಕೊಳ್ಳುತ್ತಾ ಬಂದ ಸುರೇಶ್ ರೈನಾ (ಮಾರ್ಚ್ 28ರವರೆಗೆ 5034 ರನ್ ಕಲೆಹಾಕಿದ್ದಾರೆ) ಹತ್ತಿರಕ್ಕೆ ಈಗಾಗಲೇ ವಿರಾಟ್ ಕೊಹ್ಲಿ (5000 ರನ್, ಮಾರ್ಚ್ 28ರ ವರೆಗೆ) ಬಂದುಬಿಟ್ಟಿದ್ದಾರೆ. ರೋಹಿತ್ ಶರ್ಮ ಇವರಿಬ್ಬರಿಗಿಂತ ಐನೂರು ಚಿಲ್ಲರೆ ರನ್‌ಗಳಷ್ಟು ಹಿಂದೆ ಇದ್ದರೆ, ಗಂಭೀರ್, ಉತ್ತಮ ನಂತರದ ಸ್ಥಾನದಲ್ಲಿ ನಗುತ್ತಿದ್ದಾರೆ.

ಬೌಂಡರಿ, ಸಿಕ್ಸರ್, ಒಟ್ಟಾರೆ ರನ್ ಗಳಿಕೆಯ ಯಾದಿಗಳಲ್ಲಿ ಜೋರಾಗಿಯೇ ಮಿಂಚುತ್ತಿರುವ ಭಾರತದ ಬ್ಯಾಟ್ಸ್‌ಮನ್‌ಗಳು ಇನಿಂಗ್ಸ್ ಒಂದರಲ್ಲಿ ಅತಿ ಹೆಚ್ಚು ವೈಯಕ್ತಿಕ ರನ್ ಗಳಿಸುವುದರಲ್ಲಿ ಮಾತ್ರ ಹಿಂದುಳಿದಿದ್ದಾರೆ. ಬ್ರೆಂಡನ್ ಮೆಕ್ಲಮ್ (ಔಟಾಗದೆ 158), ಡಿವಿಲಿಯರ್ಸ್ (ಔಟಾಗದೆ 133, ಔಟಾಗದೆ 129), ಕ್ರಿಸ್ ಗೇಲ್ (ಔಟಾಗದೆ 128) ಹೆಸರಲ್ಲೇ 'ಪಂದ್ಯವೊಂದರಲ್ಲಿ ಗಳಿಸಿದ ದೊಡ್ಡ ವೈಯಕ್ತಿಕ ಮೊತ್ತ'ಗಳಿದ್ದವು. ಈ ಪಟ್ಟಿಗೆ ರಿಷಭ್ ಪಂತ್ (ಔಟಾಗದೆ 128) ಕಳೆದ ವರ್ಷದ ಐಪಿಎಲ್‌ನಲ್ಲೇ ಸೇರುವ ಮೂಲಕ ಸಂಚಲನ ಮೂಡಿಸಿದರು. ಈ ಬಾರಿ ಮುಂಬೈ ಇಂಡಿಯನ್ಸ್ ಎದುರು ಬರೀ 28 ಎಸೆತಗಳಲ್ಲಿ ಅವರು ಹೊಡೆದ 78 ಕಂಡೇ ಯುವಿ 'ಅಬ್ಬಾ' ಎಂಬ ಉದ್ಗಾರ ತೆಗೆದದ್ದು.

ಸ್ಟ್ರೈಕ್ ರೇಟ್ ಕಡೆಗೆ ನೋಡಿದರೆ ಕಾಣುವ ಆಟಗಾರರ ಗೊಂಚಲೇ ಬೇರೆ. ಅಲ್ಲಿಯೂ ರಿಷಭ್ ಇದ್ದಾರೆನ್ನುವುದು ಮಿಂಚು ದೊಡ್ಡದಾಗುತ್ತಿರುವುದರ ಸೂಚನೆಯಷ್ಟೆ. ಆಂಡ್ರೂ ರಸೆಲ್ ಸ್ಟ್ರೈಕ್ ರೇಟ್ 183.45ರಷ್ಟಿದೆ. ಸುನಿಲ್ ನರೇನ್ 171.12ರಲ್ಲಿದ್ದು, ವಿಂಡೀಸ್ ಭುಜಬಲ ಪರಾಕ್ರಮಿಗಳಿಗೆ ಪರಾಕು ಯಾಕೆ ಸಲ್ಲಬೇಕು ಎನ್ನುವುದನ್ನು ಸಾರಿದ್ದಾರೆ. ಒಬ್ಬ ಬೌಲರ್ ಆಗಿ ಕಾಲಿಟ್ಟ ನರೇನ್ ಬ್ಯಾಟಿಂಗ್‌ನಲ್ಲೂ ಹೇಗೆ ಹೊಳೆದರೆನ್ನುವುದನ್ನು ಐಪಿಎಲ್ ಅಭಿಮಾನಿಗಳೆಲ್ಲ ಚೆನ್ನಾಗಿಯೇ ಬಲ್ಲರು. ಮೂರನೇ ಸ್ಥಾನದಲ್ಲಿ ರಿಷಭ್ 167.41ರ ಸ್ಟ್ರೈಕ್‌ರೇಟ್‌ನಲ್ಲಿ ನಿಂತಿದ್ದಾರೆ. ಎದುರಾಳಿ ಬೌಲರ್‌ಗಳು ನಿದ್ದೆಗೆಡಲು ಬೇಕಾದ ಕೂರಂಬು ಇದು. ಸ್ಟ್ರೈಕ್ ರೇಟ್ ವಿಷಯದಲ್ಲಿ ಆನಂತರದ ಸ್ಥಾನಗಳಲ್ಲಿ ಇರುವ ಕ್ರಿಸ್ ಮಾರಿಸ್, ಗ್ಲೆನ್ ಮ್ಯಾಕ್ಸ್‌ವೆಲ್,

## ಈ ಸಲ ಕಪ್ ನಮ್ದೇ!

2015ರ ವಿಶ್ವಕಪ್‌ಗೆ 15 ಆಟಗಾರರನ್ನು ಆಯ್ಕೆ ಮಾಡಿದಾಗ ಆ ಪೈಕಿ ಐವರು ಚೆನ್ನೈ ಸೂಪರ್ ಕಿಂಗ್ಸ್ ಐಪಿಎಲ್ ತಂಡದ ಪರವಾಗಿ ಆಡಿದವರೇ ಇದ್ದರು. ಆ ಪಟ್ಟಿ ಪ್ರಕಟವಾಗಿದ್ದೇ ಸಾಮಾಜಿಕ ಜಾಲತಾಣಗಳಲ್ಲಿ ಅನೇಕರು ಟೀಕಿಸಿದ್ದರು. ಅದು 'ದೋನಿ ಲಾಬಿ' ಎನ್ನುವುದು ಅನೇಕರ ಭಾವನೆಯಾಗಿತ್ತು. ಈ ಸಲ ವಿರಾಟ್ ಕೊಹ್ಲಿ ಭಾರತ ಕ್ರಿಕೆಟ್ ತಂಡದ ನಾಯಕ. ಆರ್‌ಸಿಬಿ ಚುಕ್ಕಾಣಿಯೂ ಅವರದ್ದೇ. ಕರ್ನಾಟಕದ ಆಟಗಾರರೇ ಇಲ್ಲದ ಈ ತಂಡದಿಂದ ಯಾರು ಆಯ್ಕೆಯಾದರೂ ಅಷ್ಟೇ ಎಂಬ ಉದಾಸೀನದ ಪ್ರತಿಕ್ರಿಯೆಗಳು ಕ್ರಿಕೆಟ್ ಪ್ರಿಯರಿಂದ ಕೇಳಿಬರುತ್ತಿವೆ. ಆದರೆ, ಆರ್‌ಸಿಬಿ ಸದಾ ಆಕರ್ಷಕವಾಗಿರುವುದು ಎರಡು ಕಾರಣಗಳಿಂದ. ಒಂದು–ಸಿಕ್ಸರ್ ವೀರರಾದ ಗೇಲ್, ಡಿವಿಲಿಯರ್ಸ್. ಇನ್ನೊಂದು – 'ಈ ಸಲ ಕಪ್ ನಮ್ದೇ' ಎಂಬ ಈಡಿಯಂ.

'ಈ ಸಲ ಕಪ್ ನಮ್ದೇ' ಎನ್ನುವುದು ಮೊದಲು ತಂಡದ ಘೋಷವಾಕ್ಯದಂತೆ ಕೇಳಿತು. ಬರಬರುತ್ತಾ ಅದೊಂದು ಹಾಸ್ಯ, ವ್ಯಂಗ್ಯಕ್ಕೆ ದೊರೆತ ದ್ರವ್ಯ ಆಗಿಬಿಟ್ಟಿತು. 'ಕೆಜಿಎಫ್' ಸಿನಿಮಾದ ಕೆಲವು ದೃಶ್ಯಗಳನ್ನು ಕೊಲಾಜ್ ಮಾಡಿ, ಅದಕ್ಕೆ ಡಬ್ ಸ್ಮ್ಯಾಷ್ ಮಾಡಿ, 'ಈ ಸಲ ಕಪ್ ನಮ್ದೇ' ಎಂಬ ಆರ್‌ಸಿಬಿ ಧ್ಯೇಯವಾಕ್ಯವನ್ನು ಲೇವಡಿ ಮಾಡಿದ 'ಮೀಮ್' ಈಗ ಸದ್ದು ಮಾಡುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಂತೂ ಈ ವಾಕ್ಯ ಬಗೆ ಬಗೆಯ ಹಾಸ್ಯ ರಸಾಯನಕ್ಕೆ ವಸ್ತುವಾಗುತ್ತಿದೆ. ಈ ವಿಷಯದಲ್ಲಿ ಕೊಹ್ಲಿ ಅವರ ಕಾಲೆಳೆಯದವರೂ ಇಲ್ಲ. ಸಮಚಿತ್ತದಿಂದಲೇ ಮನರಂಜನೆಯ ಈ ಪರಿಯನ್ನು ಸ್ವೀಕರಿಸಿರುವಂತೆ ಕಾಣುವ ಭಾರತ ಕ್ರಿಕೆಟ್ ತಂಡದ ನಾಯಕ ಕೂಡ 'ಈ ಸಲ ಕಪ್ ನಮ್ದೇ' ಎಂದು ಮನಸ್ಸಿನಲ್ಲೇ ಗುನುಗಿಕೊಳ್ಳುತ್ತಿರಬೇಕು.



**ಕಪ್ ನಮ್ದೇ:** 'ರಾಯಲ್ ಚಾಲೆಂಜರ್ಸ್ ಬೆಂಗಳೂರು' ತಂಡದ ನಾಯಕ ವಿರಾಟ್ ಕೊಹ್ಲಿ